ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. : 4156/2022
DW-01

ಸಾಕ್ಷಿದಾರರ ಹೆಸರು : ಸಲೀಂ ತಂದೆ ಹುಸೇನ ಶೇಖ

ವಯಸ್ಸು : 57 ವರ್ಷ

ಉದ್ಯೋಗ : ಶಿಕ್ಷಕರು

ವಾಸ ಸ್ಥಳ : ನಿಂಬಾಳ

(ಈ ದಿವಸ ದಿನಾಂಕ 02.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಶ್ರೀ. ಎಂ.ಎ.ಬಿ. ವಕೀಲರಿಂದ : ಆರೋಪಿತರ ಪರವಾಗಿ :**

1) ಪಿರ್ಯಾದುದಾರರು ನಮ್ಮ ಗ್ರಾಮದವರಾದ ಕಾರಣ ನನಗೆ ಪರಿಚಯವಾಗಿರುತ್ತಾರೆ. ಆತನು ವೇಲ್ಡಿಂಗ್ ಮತ್ತು ಬಡಿಗೆ ಕೆಲಸ ಮಾಡುತ್ತಾರೆ. ಪಿರ್ಯಾದುದಾರರ ತಮ್ಮನಾದ ರಾಮಣ್ಣ ರವರು ಶಿಕ್ಷಕರಾಗಿದ್ದು, ಅವರು ನನಗೆ ಪರಿಚಯ ಇದ್ದಾರೆ. ಸದರಿ ರಾಮಣ್ಣನವರು ಗೋರನಾಳ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ರಾಮಣ್ಣನವರ ಹೆಂಡತಿಯ ಹೆಸರು ರೇಣುಕಾ ಆಗಿರುತ್ತದೆ. ಆಕೆಯು ಸಹ ಶಿಕ್ಷಕಳಾಗಿ ರಾಯಚೂರು ಜಿಲ್ಲೆ ಮಾನ್ವಿ ತಾಲೂಕು ಮನಿಗೇರಿ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದಾರೆ.

2) ಆರೋಪಿಯ ಅತ್ತಿಗೆಯಾದ ರೇಣುಕಾ ರವರು ಮ್ಯೂಚವಲ್ ವರ್ಗಾವಣೆ ಕೋರಿದ್ದು, ಆಕೆಯು ಅಗರಖೇಡಕ್ಕೆ ವರ್ಗಾವಣೆಗೊಳ್ಳಲು ಮತ್ತು ನಾನು ಮನಿಗೇರಿ ಗ್ರಾಮಕ್ಕೆ ವರ್ಗಾವಣೆಯಾಗಲು ಒಪ್ಪಿ ನನ್ನ ಸೇವೆಯ ದಾಖಲೆಗಳನ್ನು

ಆಕೆಗೆ ನೀಡಿದ್ದೆ. ನಂತರ ನನಗೆ ಮತ್ತು ರೇಣುಕಾರವರಿಗೆ ಮ್ಯೂಚವಲ್ ವರ್ಗಾವಣೆಯಾಗಲಿಲ್ಲ.

3) ರೇಣುಕಾಳ ಗಂಡನಾದ ರಾಮಣ್ಣ ನವರು ನನ್ನ ಮಗನಾದ ತನ್ವೀರಅಹ್ಮದ ರವರಿಗೆ ಫೋನ್ ಪೇ ಮುಖಾಂತರ 1 ಲಕ್ಷದ 50 ಸಾವಿರ ರೂಪಾಯಿಗಳನ್ನು ನೀಡಿದ್ದರು. ರಾಮಣ್ಣನವರು ಫೋನ್ ಪೇ ಮುಖಾಂತರ ಹಲವಾರು ಬಾರಿ ಒಟ್ಟು 1 ಲಕ್ಷದ 50 ಸಾವಿರ ರೂಪಾಯಿಗಳನ್ನುಕಂತು ರೂಪದಲ್ಲಿ ಪಾವತಿಸಿದ್ದರು. ವರ್ಗಾವಣೆ ರದ್ದಾದ ನಂತರ ರಾಮಣ್ಣನವರು ತಾನು ನೀಡಿರುವ ಹಣವನ್ನು ಕೊಡುವಂತೆ ಕೇಳಿದ್ದರು. ಆಗ ನಾನು ನನ್ನ ಬಳಿ ಹಣ ಇಲ್ಲ ಎಂದು ಹೇಳಿದಾಗ ಭದ್ರತೆಗಾಗಿ ಎರಡು ಚೆಕ್ಕುಗಳನ್ನು ತೆಗೆದುಕೊಂಡಿರುತ್ತಾರೆ. ಅವುಗಳ ಸಂಖ್ಯೆಯು 182721 ಮತ್ತು 182722 ಆಗಿರುತ್ತದೆ. ಅವುಗಳು ಕೆನರಾ ಬ್ಯಾಂಕಿಗೆ ಸೇರಿದ್ದು, ನಾನು ಚೆಕ್ಕುಗಳನ್ನು ದಿ : 31-12-2021 ರಂದು ನೀಡಿರುತ್ತೇನೆ. ನಮ್ಮ ಗ್ರಾಮದವರಾದ ಕಾರಣ ನಾನು ಖಾಲಿ ಚೆಕ್ಕುಗಳನ್ನು ಸಹಿ ಮಾಡಿ ನೀಡಿರುತ್ತೇನೆ. ಅದರಲ್ಲಿ ನಾನು ಯಾವುದೇ ವಿವರಗಳನ್ನು ಬರೆದಿರುವುದಿಲ್ಲ. ನಾನು ಸದರಿ ರಾಮಣ್ಣರವರಿಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ದಿ : 15.05.2022 ರಂದು ಮರು ಪಾವತಿ ಮಾಡಿರುತ್ತೇನೆ. ನಾನು ಹಣ ಪಾವತಿ ಮಾಡಿದ ನಂತರ ಚೆಕ್ಕನ್ನು ವಾಪಸ್ ಕೊಡುವಂತೆ ಕೇಳಿದ್ದು, ಆದರೆ ಅವರು ಚೆಕ್ಕನ್ನು ನನಗೆ ಕೊಟ್ಟಿರಲಿಲ್ಲ.

4) ನಂತರ ಸದರಿ ರಾಮಣ್ಣರವರು ಚೆಕ್ಕನ್ನು ನನಗೆ ತಲುಪಿಸುವಂತೆ ಪಿರ್ಯಾದುದಾರರಿಗೆ ನೀಡಿದ್ದು, ಪಿರ್ಯಾದುದಾರರು ಚೆಕ್ಕುಗಳನ್ನು ನನಗೆ ನೀಡದೇ ದುರುಪಯೋಗಪಡಿಸಿಕೊಂಡು ಪ್ರಸ್ತುತ ದೂರನ್ನು ದಾಖಲಿಸಿರುತ್ತಾರೆ. ಪಿರ್ಯಾದುದಾರರು ಮತ್ತು ನನ್ನ ನಡುವೆ ಯಾವುದೇ ರೀತಿಯ ವ್ಯವಹಾರ ನಡೆದಿಲ್ಲ.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ದೇವರಾಜು ಹೆಚ್.ಆರ್.)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.